ದಿನಾಂಕಃ15.06.2024 ರಂದು ಡಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎಸ್ ಎಂ ವಕೀಲರಿಂದಃ</u>

ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ನನ್ನ ವಯಸ್ಸು 55 ವರ್ಷ. ಗೋಪಾಲಪ್ಪರವರಿಗೆ 6 ಜನ ಮಕ್ಕಳು. ನಾನು ಅವರ 3 ನೇ ಮಗಳು. ನನ್ನ ತಂದೆಯ ವಾಸ ಪಟ್ಟರಹಳ್ಳಿ ಎಂದರೆ ಸರಿ. ನಾನು ಸುಬ್ರಮಣಿ ಅವರ 2 ನೇ ಹೆಂಡತಿ ಎಂದರೆ ಸರಿ. ಸುಬ್ರಮಣಿರವರ ಮೊದಲನೆಯ ಹೆಂಡತಿ ಯಶೋಧರವರು ಬದುಕಿರುತ್ತಾರೆ ಎಂದರೆ ಸರಿ. ಯಶೋಧ ರವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ಈಗ ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಕಿವಿ ಕೇಳಿಸುವುದಿಲ್ಲ. ದಾವೆ ಹೂಡಿದ ಮೊದಲು 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಆರೋಗ್ಯವಾಗಿದ್ದು ಅವರಿಗೆ ಕಿವಿ ಚೆನ್ನಾಗಿ ಕೇಳಿಸುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ತಿಳಿದುಬರುತ್ತದೆ ಎಂದು ನಾನು ಬಲವಂತವಾಗಿ ನಿಡಿ 1 ಅನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. 1 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಎಂದರೆ ಮೊದಲು ವ್ಯವಸಾಯ ಮಾಡುತ್ತಿದ್ದರು. ಈಗ ಕೆಲಸ ಮಾಡುತ್ತಿಲ್ಲ. ಈ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿರುತ್ತಾರೆ ಎಂದರೆ ವಾದಿಗಳು ಪ್ರತಿವಾದಿಗಳ ವಿರುದ್ಧ ಹೂಡಿರುತ್ತಾರೆ. ಎಷ್ಟು ಸ್ವತ್ತುಗಳ ಮೇಲೆ ದಾವೆ ಹೂಡಿರುತ್ತಾರೆ ಎಂದರೆ 23. ದಾವಾ ಸ್ವತ್ತುಗಳ ಚೆಕ್ಕು ಬಂದಿ ಹೇಳಲಾಗುತ್ತದೆಯೇ ಎಂದರೆ ಕೆಲವೊಂದು ಹೇಳುತ್ತೇನೆ. 1 ನೇ ಪ್ರತಿವಾದಿಯ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರ ಹೆಸರು ಮುನಿಯಮ್ಮ ಮತ್ತು ಚಂಗಮ್ಮ

ಎಂದರೆ ಸರಿ. ಮೊದಲನೆಯ ಹೆಂಡತಿ ಮುನಿಯಮ್ಮರವರು ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ನೆನಪಿಲ್ಲ. 1946 ರಲ್ಲಿ ಮುನಿಯಮ್ಮರವರು ಮರಣ ಹೊಂದಿರುತ್ತಾರೆ ಎಂದರೆ ನೆನಪಿಲ್ಲ. ಮುನಿಯಮ್ಮರವರು ಮರಣ ಹೊಂದಿದ ನಂತರ ದೊಡ್ಡಪ್ಪರವರು 952 ರಲ್ಲಿ 2 ನೆಯ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

3. 1 ನೇ ಪ್ರತಿವಾದಿಯ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದರೆ 1988 ರಲ್ಲಿ. ಅವರು ಬದುಕಿದ್ದಾಗ ಅವರೇ ಕುಟುಂಬದ ಜವಾಬ್ದಾರಿ ವಹಿಸಿಕೊಂಡಿದ್ದರು ಎಂದರೆ ಸರಿ. 1996 ರಲ್ಲಿ ಆಗಿದೆ ಎನ್ನಲಾದ ವಿಭಾಗಕ್ಕೆ ಸಂಬಂಧಪಟ್ಟಂತೆ ದಾಖಲಾತಿ ಇದೆಯೇ ಎಂದರೆ ವಾದಿಗಳ ಬಳಿ ಇರುತ್ತದೆ. ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ಸದರಿ ವಿಭಾಗದಲ್ಲಿ ಯಾವುದೇ ಶೆಡ್ಯೂಲ್ ಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೂಜುಬಾನಿ ವಿಭಾಗವಾದರೆ ಪ್ರತಿಯೊಬ್ಬರಿಗೂ ಅವರವರ ಭಾಗದ ಪತ್ರ ನೀಡಲಾಗುತ್ತದೆ ಎಂದರೆ ಸರಿ ಆದರೆ ಸದರಿ ದಾಖಲಾತಿ ವಾದಿಗಳ ಬಳಿ ಇರುತ್ತದೆ.

4. ಸರ್ವೆ ನಂಬರ್ 2/2, 23 ಗುಂಟೆ, ಸರ್ವೆ ನಂಬರ್ 97/9, 25 ಗುಂಟೆ, ಐಟಂ ನಂಬರ್ 7 ಮತ್ತು ಐಟಂ ನಂಬರ್ 15 ಸದರಿ ಸ್ವತ್ತುಗಳು ಚಂಗಮ್ಮರವರ ಭಾಗಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 2/2 ಚಂಗಮ್ಮರವರ ತಾಯಿ ಮನೆಯಿಂದ ಬಂದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆ ಚಂಗಮ್ಮರವರಿಗೆ ಮಾಡಿರುತ್ತಾರೆ. 1 ನೇ ಪ್ರತಿವಾದಿಯ ತಂದೆ ಸದರಿ ಸ್ವತ್ತನ್ನು ಚಂಗಮ್ಮರವರಿಗೆ ಮಾಡಿದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರಬಹುದು. ದಾವಾ ಸ್ವತ್ತುಗಳು 1 ಮತ್ತು 3 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ.

5. ಐಟಂ ನಂಬರ್ 8, ಐಟಂ ನಂಬರ್ 19, ಐಟಂ ನಂಬರ್ 20, ಐಟಂ ನಂಬರ್ 21, ಐಟಂ ನಂಬರ್ 22 ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಿಡಿ 2 1947-48 ರಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ. ನಿಡಿ 2 ರಲ್ಲಿ ದಿಃ 24.07.1981 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ 2ರ 3 ನೇ ಪುಟದಲ್ಲಿ ದಿಃ 03.08.1981 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ 2 ಅನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

6. ಐಟಂ ನಂಬರ್18 ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿರುತ್ತದೆ. ಸರ್ವೆ ನಂಬರ್ 91, 5 ಎಕರೆ 10 ಗುಂಟೆ ಜಾಗ ಸರ್ವೆ ನಂಬರ್ 38/3 ಎ, ಸರ್ವೆ ನಂಬರ್ 29/6, ಸರ್ವೆ ನಂಬರ್ 2/4, ಸರ್ವೆ ನಂಬರ್ 29/8 ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಯಾಗಿರುವುದಿಲ್ಲ 2 ನೇ ಪ್ರತಿವಾದಿಯ ಗಂಡನ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎದರೆ ಹಾಜರುಪಡಿಸಿರುತ್ತೇನೆ. ಯಾವುದೇ ವಿಭಾಗವಾಗದೇ ಇದ್ದರೂ ವಿಭಾಗವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿಃ 20.06.2019 ರಂದು ವಾದಿಗಳು ಪ್ರತಿವಾದಿಗಳ ಬಳಿ ವಿಭಾಗ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾತ ಮೊದಲೇ ಕೊಟ್ಟಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು